VIJAYAKUMAR KANNUR
Digitally signed by VIJAYAKUMAR KANNUR
Date: 2025.07.16 10:45:44 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 15.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಸಿ ಯು ವಕೀಲರಿಂದ :**

ನಿಪಿ 40 ರ ದಾಖಲೆಯಲ್ಲಿನ ನಮ್ಮ ಕುಟುಂಬದ ವಂಶಾವಳಿ ನಿಜವಿರುವುದಿಲ್ಲ.

2. ಸಿದ್ದಪ್ಪ ವಾದಿ 3 ರವರ ಜೊತೆ 3 ನೇ ಮದುವೆ ಮಾಡಿಕೊಂಡ ನಂತರ ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು 2 ರವರು ಜನ್ಮ ತಾಳಿದ್ದು , ಇವರ ಶಾಲೆ ದಾಖಲೆಗಳಲ್ಲಿ ಮತ್ತು ಇತರ ದಾಖಲೆಗಳಲ್ಲಿ ತಂದೆಯ ಹೆಸರು ಸಿದ್ದಪ್ಪ ಕಲ್ಯಾಣಿ ಅಂತ ದಾಖಲು ಮಾಡಿರುವುದು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಅದೇ ರೀತಿ ವಾದಿ 3 ರವರ ಇತರೆ ದಾಖಲೆಗಳಲ್ಲಿಯೂ ಸಹ ಗಂಡನ ಹೆಸರು ಸಿದ್ದಪ್ಪ ಕಲ್ಯಾಣಿ ಅಂತ ದಾಖಲು ಅಗಿರುವುದು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 1 ರಿಂದ 3 ರವರು ನಮ್ಮ ತಂದೆಯ ಹೆಸರನ್ನು ದುರುಪಯೋಪಡಿಸಿಕೊಳ್ಳುತ್ತಿರುವರು ಎಂದು ಹೇಳಿ ಇವತ್ತಿನವರೊ ಯಾವುದೇ ಕಾನೂನು ಕ್ರಮವನ್ನು ಅವರ ವಿರುದ್ದ ಕೈಗೊಂಡಿರುವುದಿಲ್ಲ. ವಾದಿ 1 ರಿಂದ 3 ರವರು ನಮ್ಮ ತಂದೆಯ ಹೆಸರನ್ನು ದುರುಪಯೋಗಪಡಿಸಿಕೊಂಡು ತಮ್ಮ ದಾಖಲೆಯಲ್ಲಿ ನಮೂದು ಮಾಡಿಕೊಂಡಿರುವ ಬಗ್ಗೆ ನಾವು ಇವತ್ತಿನವರೆಗೂ ಕಾನೂನು ಕ್ರಮ ಕೈಗೊಂಡಿರುವುದಿಲ್ಲ, ಏಕೆಂದರೆ ಅದು ಸುಳ್ಳು ಇರುವುದು ಈ ಸಂಗತಿ ಈ ದಾವೆ ದಾಖಲು ಮಾಡಿದ ನತಂರ ಗೊತ್ತಾಗಿರುವುದು. ಈ ದಾವೆ ದಾಖಲು ಮಾಡಿದ ನಂತರ ಸಹ ಪ್ರತಿವಾದಿ 1 ರಿಂದ 3 ರವರ ವಿರುದ್ದ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

3. ಶಾಲಾ ದಾಖಲೆಗಳಲ್ಲಿ ಅವರ ಪೋಷಕರು ನೀಡಿರುವ ಮಾಹಿತಿಯನ್ನು ಆ ದಾಖಲೆಗಳಲ್ಲಿ ನಮೂದು ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ವಾದಿ 1 ಮತ್ತು 2 ರವರನ್ನು ಶಾಲೆಗೆ ದಾಖಲು ಮಾಡುವ ಸಮಯಲ್ಲಿ ಮೃತ ಸಿದ್ದಪ್ಪ ಇವರ ಮಾಹಿತಿಯನ್ನು ನೀಡಿರುವನು ಎಂದರೆ ಸರಿಯಲ್ಲ. ವಾದಿಯರ ದಾಖಲಾತಿಗಳು ನಿಜವಿರುವುದರಿಂದ ಆ ದಾಖಲಾತಿಯಲ್ಲಿನ ಸಂಗತಿಗಳನ್ನು ಇಲ್ಲಿಯವರೆಗೆ ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವಧಿಯಲ್ಲಿ ಮತ್ತು ಅವರು ಮೃತ ಪಟ್ಟ ನಂತರ ವಾದಿಯರು ತಮ್ಮ ಪಾಲನ್ನು ಕೇಳಿದ್ದು , ಆಗ ಅವರಿಗೆ ಇಂದು ಮತ್ತು ನಾಳೆ ಕೊಡುತ್ತೇವೆ ಅಂತ ಮುಂದೂಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಒಂದು ಆಸ್ತಿಯನ್ನು ವಾದಿಯರಿಗೆ ಗೊತ್ತಾಗದ ಹಾಗೆ ಪ್ರತಿವಾದಿ 10 ರವರಿಗೆ ನಾವು ಮಾರಾಟ ಮಾಡಿದ್ದೇವೆ ಅಂತ ಸೂಚಿಸುವುದು ಸರಿಯಲ್ಲ. ಪ್ರತಿವಾದಿ 10 ರವರ ಹೆಸರಿನಲ್ಲಿ ಮಂಜೂರಾದ ಹಕ್ಕು ಬದಲಾವಣೆಯ ಆದೇಶಗಳು ಕಾನೂನು ಬಾಹಿರವಾಗಿರುವವು, ಅವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಕ್ಕು ಬದಲಾವಣೆಯ ಆದೇಶಗಳು, ಕುಟುಂಬ ವ್ಯವಸ್ಥಾ ಪತ್ರಗಳ ಮೇಲೆ ವಾದಿಯರ ಒಪ್ಪಿಗೆ ಸಹಿ ಪಡೆಯದೇ ಇರುವುದರಿಂದ ಅವು ಖೊಟ್ಟಿಯಾಗಿ ಇರುವವು ಎಂದರೆ ಸರಿಯಲ್ಲ. ನಾವು ಖರೀದಿ ವಾಡಿರುವರು ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಖರೀದಿ ಮಾಡಿರುವ ಆಸ್ತಿಗಳು ಜಂಟಿ ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಆಸ್ತಿಗಳು ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳಲ್ಲಿ ನನ್ನ ಮತ್ತು ಉಳಿದ ಪ್ರತಿವಾದಿಯ ಹೆಸರುಗಳು ಕೇವಲ ತೋರಿಕೆಗಾಗಿ ದಾಖಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳು ನಮ್ಮ ಜೊತೆ ವಾದಿ 1 ರಿಂದ 3 ರವರು ಸಹ ಸಾಮೂಹಿಕ ಕಬ್ಜೆಯಲ್ಲಿ ಇರುವರು ಎಂದರೆ ಸರಿಯಲ್ಲ. ನಾವು ಮಾಡಿಕೊಂಡಿರುವ ವಾಟ್ನ ಪತ್ರವು ಕಾನೂನು ಬದ್ದವಾಗಿರುವುದಿಲ್ಲ ಮತ್ತು ಸಂಜಸವಾದ ಸ್ಟ್ಯಾಂಪ್ ಶುಲ್ಕ ಸಂದಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿರುವ ದಾಖಲೆಗಳು ಈ ದಾವೆಗೆ ಅನುಕೂಲವಾಗುವ ಸಲುವಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇವೆ ಅಂತ ಸೂಚಿಸುವುದು ಸರಿಯಲ್ಲ. ಈ ದಾವಾ ಆಸ್ತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ನಮಗೆ

ಸ್ವಂತ ಆದಾಯ ಎಷ್ಟು ಇತ್ತು ಎಂದು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆದಾಯ ತೆರಿಗೆ ದಾಖಲೆಗಳು ಮತ್ತು ಪಾವತಿ ಮಾಡಿದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ , ಆದರೆ ಅವಶ್ಯಕತೆ ಬಿದ್ದರೆ ಅವುಗಳನ್ನು ಹಾಜರು ಪಡಿಸುತ್ತೇನೆ.

4. ವಾದಿ 1 ಮತ್ತು 2 ರವರು ಮೃತ ಸಿದ್ದಪ್ಪ ಮತ್ತು ವಾದಿ 3 ರವರು 3ನೇ ವೈವಾಹಿಕ ಜೀವನದಿಂದ ಜನ್ಮ ತಾಳಿದ ಮಕ್ಕಳು ಆಗಿರುವರು ಎಂದರೆ ಸರಿಯಲ್ಲ. ವಾದಿ 3 ರವರು ಮೃತ ಸಿದ್ದಪ್ಪನ ಕಾನೂನು ಬದ್ದವಾದ 3ನೇ ಹೆಂಡತಿಯ ಎಂದರೆ ಸರಿಯಲ್ಲ, ಸಿದ್ದಪ್ಪ ತನ್ನ ಮೊದಲನೇಯ ಮತ್ತು 2ನೇಯ ಹೆಂಡತಿ ಮೃತ ಪಟ್ಟ ನಂತರ ವಾದಿ 3 ರವರ ಜೊತೆ ವಿವಾಹ ಮಾಡಿಕೊಂಡಿರುವನು ಎಂದರೆ ಸರಿಯಲ್ಲ. ವಾದಿ 1 ಮತ್ತು 2 ರವರು ಸಿದ್ದಪ್ಪನ ಕಾನೂನು ಬದ್ದವಾದ ಮಕ್ಕಳು ಆಗಿರುವುರಿಂದ ವಾದಿಯರಿಗೆ ಹಿಸ್ಸೆ ಇರುವುದು ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ನೀಡಬಾರದು ಎಂಬ ಕಾರಣಕ್ಕೆ ಸುಳ್ಳು ಲಿಖಿತ ಪತ್ರ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 10 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.16 10:45:53 +0530